# ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಕಾರ್ಯ ಮತ್ತು ಪಾಲನೆ

## ವೃತ್ತ ಹುವಿಸಕಂನಿ., ಬೆಳಗಾವಿ

## ಪ್ರಕರಣ ಸಂಖ್ಯೆ: 15/2017

ಹಾಜರಿದ್ದವರು : 1. ಶ್ರೀ. ಗಿರಿಧರ ಕುಲಕರ್ಣಿ, ಅಧೀಕ್ಷಕ ಅಭಿಯಂತರರು(ವಿ)(ಪ್ರ) ಹಾಗೂ ಅಧ್ಯಕ್ಷರು.
2. ಶ್ರೀ. ಎಸ್.ಆರ್. ಮಂಜಪ್ಪ, ಉಪಲೆಕ್ಕನಿಯಂತ್ರಣಾಧಿಕಾರಿ, ಸದಸ್ಯರು.
3. ಶ್ರೀ. ಸುನಿಲ್.ಎಸ್ ಸಾಣಿಕೊಪ್ಪ, ವಕೀಲರು, ಸದಸ್ಯರು.

ಶ್ರೀ ಮಿಶಾಬ್ ಎ. ಬಾಗಲಕೋಟಿ,
ಸಿ.ಟಿ.ಎಸ್ ನಂ-4108,
ಹಳೆ ಪಿ.ಬಿ ರಸ್ತೆ,
ಬೆಳಗಾವಿ. -----------ದೂರುದಾರರು

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-1,
ಹುವಿಸಕಂನಿ., ಬೆಳಗಾವಿ. ------------ ಪ್ರತಿವಾದಿ

1. ಶ್ರೀ. ಮಿಶಾಬ್ ಎ. ಬಾಗಲಕೋಟಿ, ಸಿ.ಟಿ.ಎಸ್ ನಂ-4108, ಹಳೆ ಪಿ.ಬಿ ರಸ್ತೆ, ಬೆಳಗಾವಿ, ಇವರು ಕೆ.ಇ.ಆರ್.ಸಿ (ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಮತ್ತು ಓಂಬಡ್ಸಮನ್) ನಿಬಂಧನೆಗಳು-2004 ರ ಅಡಿಯಲ್ಲಿ ಒದಗಿಸಿದ ಅವಕಾಶಗಳ ಅಡಿಯಲ್ಲಿ ತಮ್ಮ ದೂರನ್ನು ವೇದಿಕೆಗೆ ಸಲ್ಲಿಸಿರುವರು.

**2. ಪ್ರಕರಣದ ಸಾರಾಂಶ :**

ಶ್ರೀ ಮಿಶಾಬ್ ಎ. ಬಾಗಲಕೋಟಿ, ಸಿ.ಟಿ.ಎಸ್ ನಂ-4108, ಹಳೆ ಪಿ.ಬಿ ರಸ್ತೆ, ಬೆಳಗಾವಿ, ರವರು ತಮ್ಮ ಹೆಸರಿನಲ್ಲಿರುವ ಸ್ಥಾವರಸಂಖ್ಯೆ ಎ.ಎಂ.ಪಿ-34057 ಕ್ಕೆ ಎಲ್.ಟಿ-3 ಜಕಾತಿಯಲ್ಲಿ ವಿಧಿಸಲಾಗಿರುವ ಹಿಂಬಿಲ್ಲು ಮೊತ್ತವನ್ನು ಆಕ್ಷೇಪಿಸಿ ವೇದಿಕೆಗೆ ದೂರು ಅರ್ಜಿ ಸಲ್ಲಿಸಿದ್ದಾರೆ.

**3. ಗ್ರಾಹಕರ ಹೇಳಿಕೆ :**

ಶ್ರೀ ಮಿಶಾಬ್ ಎ. ಬಾಗಲಕೋಟಿ, ಸಿ.ಟಿ.ಎಸ್ ನಂ-4108, ಹಳೆ ಪಿ.ಬಿ ರಸ್ತೆ, ಬೆಳಗಾವಿ, ರವರು ತಮ್ಮ ಸ್ಥಾವರ ಸಂಖ್ಯೆ: ಎ.ಎಂ.ಪಿ 34057 ಗೆ ಎಲ್.ಟಿ-5 ಜಕಾತಿಯಲ್ಲಿ ವಿದ್ಯುತ್ ಸಂಪರ್ಕವಿದ್ದು, ಸಕಾನಿಇಂ(ವಿ), ಎಲ್.ಟಿ.ಎಂ.ಆರ್ ಉಪವಿಭಾಗದವರು ಸದರಿ ಸ್ಥಾವರದ ಪರಿವೀಕ್ಷಣೆ ಮಾಡಿ ಸ್ಥಾವರವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ಎಂದು ವರದಿ ನೀಡಿರುತ್ತಾರೆ. ಆದರೆ ಸದರಿ ಸ್ಥಾವರದಿಂದ ವಿದ್ಯುತ್‌ನ್ನು ಯಾವುದೇ ವಾಣಿಜ್ಯ ಉದ್ದೇಶಕ್ಕಾಗಿ ಬಳಸಲಾಗುತ್ತಿಲ್ಲ ಎಂದು ತಿಳಿಸಿ, ವಿಧಿಸಿದ ಹಿಂಬಿಲ್ಲು ಮೊತ್ತ ರೂ.13017/- ನ್ನು ಮನ್ನಾ ಮಾಡುವಂತೆ ವಿನಂತಿಸಿರುತ್ತಾರೆ.

4. **ಕಂಪನಿ ಪರವಾಗಿ :**

**1.ಶ್ರೀ.ಎಸ್.ಪಿ ಕೋಲಕಾರ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ(ವಿ),ಕಾ ಮತ್ತು ಪಾ ನಗರ ಉಪವಿಭಾಗ-1, ಹುವಿಸಕಂನಿ., ಬೆಳಗಾವಿ ಇವರ ಹೇಳಿಕೆ:-**

ಶ್ರೀ ಮಿಶಾಬ್ ಎ. ಬಾಗಲಕೋಟಿ, ಸಿ.ಟಿ.ಎಸ್ ನಂ-4108, ಹಳೆ ಪಿ.ಬಿ ರಸ್ತೆ, ಬೆಳಗಾವಿ, ಇವರ ಹೆಸರಿನಲ್ಲಿ ಸ್ಥಾವರ ಸಂಖ್ಯೆ ಎ.ಎಂ.ಪಿ 34057 ಗೆ ಎಲ್.ಟಿ-5 ಜಕಾತಿಯಲ್ಲಿ 10 ಎಚ್.ಪಿ ಸಂಪರ್ಕಿತ ಹೊರೆಯೊಂದಿಗೆ ದಿ:15-06-2012 ರಂದು ವಿದ್ಯುತ್ ಸಂಪರ್ಕ ನೀಡಲಾಗಿರುತ್ತದೆ. ಸದರಿ ಸ್ಥಾವರಕ್ಕೆ ಸಕಾನಿಇಂ(ವಿ), ಎಲ್.ಟಿ.ಎಂ.ಆರ್ ಉಪವಿಭಾಗ, ಬೆಳಗಾವಿ ರವರು ದಿ:25-05-2017 ರಂದು ಸ್ಥಳ ಪರಿಶೀಲನೆ ನಡೆಸಿ ತಮ್ಮ ವರದಿ ಸಂಖ್ಯೆ 59924 ದಿ:25-05-2017 ರಲ್ಲಿ ಸದರಿ ಸ್ಥಾವರವನ್ನು ಎಲ್.ಟಿ-3 ಜಕಾತಿಗೆ ಅನ್ವಯವಾಗುವಂತೆ ಫ್ಯೂಲ್ ಇಂಜೆಕ್ಷನ್ ಪಂಪ್ ರಿಪೇರಿ (Fuel Injection Pump repair) ಗೋಸ್ಕರ ಬಳಸಲಾಗುತ್ತಿರುವುದಾಗಿ ವರದಿ ನೀಡಿರುತ್ತಾರೆ. ಸದರಿ ವರದಿ ಅನ್ವಯ ನಗರ ಉಪವಿಭಾಗ-1 ರ ಪತ್ರ ಸಂಖ್ಯೆ 1731 ದಿ:05-09-2017 ರಲ್ಲಿ ಗ್ರಾಹಕರಿಗೆ ರೂ.13017/- ಹಿಂಬಿಲ್ಲು ವಿಧಿಸಲಾಗಿದೆ. ಗ್ರಾಹಕರು ರೂ.8660/- ನ್ನು ದಿ:25-11-2017 ರಂದು ಮತ್ತು ರೂ.4000/- ನ್ನು ದಿ:12-12-2017 ರಂದು ಪಾವತಿಸಿರುತ್ತಾರೆ.

ಮುಂದುವರೆದು ಶಾಖಾಧಿಕಾರಿ ಶಾಖೆ ನಂ-3 ಇವರ ದಿ:06-12-2017 ರ ವರದಿ ಪ್ರಕಾರ ಗ್ರಾಹಕರ ಅರ್ಜಿ ಪತ್ರ ದಿ:25-11-2017 ರನ್ವಯ ಸ್ಥಾವರ ಸಂಖ್ಯೆ ಎ.ಎಂ.ಪಿ-34057 ಸ್ಥಾವರವನ್ನು ಶಾಶ್ವತವಾಗಿ ವಿದ್ಯುತ್ ನಿಲುಗಡೆ ಮಾಡಲಾಗಿರುತ್ತದೆ ಹಾಗೂ ಶಾಶ್ವತ ವಿದ್ಯುತ್ ನಿಲುಗಡೆ ನಂತರ ಅಂತಿಮ ಬಿಲ್ಲು ರೂ.5944/- ಆಗಿದ್ದು, ಠೇವಣಿ ರೂ.3480/- ಹೊಂದಾಣಿಕೆ ಮಾಡಿ ರೂ.2464/- ಕಂದಾಯ ಬಾಕಿ ಉಳಿದಿರುತ್ತದೆ.

5. **ವೇದಿಕೆಯ ಸದಸ್ಯರುಗಳು ಚರ್ಚಿಸಿ ಕಂಡು ಬಂದ ಅಂಶಗಳು:**

1. ಸ್ಥಾವರ ಸಂಖ್ಯೆ ಎ.ಎಂ.ಪಿ 34057 ಗೆ ಶ್ರೀ ಮಿಶಾಬ್ ಎ. ಬಾಗಲಕೋಟಿ, ಸಿ.ಟಿ.ಎಸ್ ನಂ-4108, ಹಳೆ ಪಿ.ಬಿ ರಸ್ತೆ, ಬೆಳಗಾವಿ, ಇವರ ಹೆಸರಿನಲ್ಲಿ 10 ಎಚ್.ಪಿ ಸಂಪರ್ಕಿತ ಹೊರೆಯೊಂದಿಗೆ ಎಲ್.ಟಿ-5 ಜಕಾತಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯಲಾಗಿದೆ.
2. ಸಕಾನಿಇಂ(ವಿ), ಎಲ್.ಟಿ.ಎಂ.ಆರ್ ಉಪವಿಭಾಗ, ಬೆಳಗಾವಿ ರವರು ದಿ:25-05-2017 ರಂದು ಎ.ಎಂ.ಪಿ 34057 ಸ್ಥಾವರದ ಸ್ಥಳ ಪರಿಶೀಲನೆ ನಡೆಸಿ ತಮ್ಮ ವರದಿ ಸಂಖ್ಯೆ 59924 ದಿ:25-05-2017 ರಲ್ಲಿ ಸದರಿ ಸ್ಥಾವರವನ್ನು ಎಲ್.ಟಿ-3 ಜಕಾತಿಗೆ ಅನ್ವಯವಾಗುವಂತೆ ಫ್ಯೂಲ್ ಇಂಜೆಕ್ಷನ್ ಪಂಪ್ ರಿಪೇರಿ (Fuel Injection Pump repairs) ಗೋಸ್ಕರ ಬಳಸಲಾಗುತ್ತಿರುವುದಾಗಿ ವರದಿ ನೀಡಿರುತ್ತಾರೆ.
3. ಎಲ್.ಟಿ-5 ಇಂದ ಎಲ್.ಟಿ-3 ಜಕಾತಿಗೆ ವಿದ್ಯುತ್ ಜಕಾತಿ ದುರುಪಯೋಗ ಎಂದು ನಗರ ಉಪವಿಭಾಗ-1 ರ ಪತ್ರ ಸಂಖ್ಯೆ 1731 ದಿ:05-09-2017 ರಲ್ಲಿ ಸದರಿ ಸ್ಥಾವರದ ಗ್ರಾಹಕರಿಗೆ ರೂ.13017/- ಹಿಂಬಿಲ್ಲು ವಿಧಿಸಲಾಗಿದೆ. ಗ್ರಾಹಕರು ರೂ.8660/- ನ್ನು ದಿ:25-11-2017 ರಂದು ಮತ್ತು ರೂ.4000/- ನ್ನು ದಿ:12-12-2017 ರಂದು ಪಾವತಿಸಿರುವುದನ್ನು ಗಮನಿಸಲಾಗಿದೆ.
4. ಗ್ರಾಹಕರ ಕೋರಿಕೆ ಮೇರೆಗೆ ಸ್ಥಾವರ ಸಂಖ್ಯೆ ಎ.ಎಂ.ಪಿ 34057 ಕ್ಕೆ ನೀಡಲಾದ ವಿದ್ಯುತ್ ಸಂಪರ್ಕವನ್ನು ಶಾಖಾಧಿಕಾರಿ ಶಾಖೆ ನಂ-3 ಇವರ ದಿ:06-12-2017 ರ ವರದಿ ಪ್ರಕಾರ ಶಾಶ್ವತವಾಗಿ ವಿದ್ಯುತ್ ನಿಲುಗಡೆ ಮಾಡಲಾಗಿರುತ್ತದೆ.
5. ಸ್ಥಾವರ ಸಂಖ್ಯೆ ಎ.ಎಂ.ಪಿ 34057 ರ ಶಾಶ್ವತ ವಿದ್ಯುತ್ ನಿಲುಗಡೆ ನಂತರ ಅಂತಿಮ ಬಿಲ್ಲು ರೂ.5944/- ಆಗಿದ್ದು, ಠೇವಣಿ ರೂ.3480/- ಹೊಂದಾಣಿಕೆ ಮಾಡಿ ರೂ.2464/- ಕಂದಾಯ ಬಾಕಿ ಉಳಿದಿರುತ್ತದೆ ಎಂದು ಸಕಾನಿಇಂ(ವಿ), ನಗರ ಉಪವಿಭಾಗ-1 ರವರು ತಿಳಿಸಿರುವುದನ್ನು ಗಮನಿಸಲಾಗಿದೆ.

6. ಸ್ಥಾವರ ಸಂಖ್ಯೆ ಎ.ಎಂ.ಪಿ 34057 ಗೆ ಶಾಶ್ವತವಾಗಿ ವಿದ್ಯುತ್ ಸಂಪರ್ಕ ನಿಲುಗಡೆಗೊಂಡ ಕಾರಣ, ಸದರಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಪಡೆಯುವಾಗ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಮಹಾನಗರ ಪಾಲಿಕೆ, ಬೆಳಗಾವಿ ರವರು ನೀಡಿದ ಪರವಾನಗಿ (Licence) ನಂ-1565/12-13 ರಲ್ಲಿ ಲೈಸೆನ್ಸದಾರರು ಶ್ರೀ ಮಿಶಬ್ ಎ ಬಾಗಲಕೋಟಿ, ಸಿ.ಟಿ.ಎಸ್ ನಂ-4108, ಹಳೆ ಪಿ.ಬಿ ರಸ್ತೆ, ಬೆಳಗಾವಿ ರವರಿಗೆ ಉಪಯೋಗ ಉದ್ದೇಶ ವ್ಯವಹಾರದ ವಿವರ "ಫ್ಯೂಲ್ ಇಂಜೆಕ್ಷನ್ ಪಂಪ್ ವರ್ಕ್‌ಶಾಪ್" ಗಾಗಿ ಲೈಸೆನ್ಸ್ ನೀಡಲಾಗಿರುತ್ತದೆ.

7. ಕೆ.ಇ.ಆರ್.ಸಿ ವಿದ್ಯುಚ್ಛಕ್ತಿ ದರಗಳು-2018 ರ ಅನುಸಾರ ತಾಪನ ಮತ್ತು ಮೋಟಿವ್ ಪವರ್ ಬಳಸುವ ಕಾರ್ಯಾಗಾರ (Workshop) ಗಳನ್ನು ಎಲ್.ಟಿ-5 ಜಕಾತಿಯಲ್ಲಿ ಪರಿಗಣಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಮತ್ತು ಹೇಳಿಕೆಗಳನ್ನು ಕುಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ.ಬೆ/ಗ್ರಾವೇ/ಪ್ರ.ಸ.15/2017-18/ 3431-38 ದಿನಾಂಕ. 28 JUL 2018

## ಆದೇಶ

ಸ್ಥಾವರ ಸಂಖ್ಯೆ ಎ.ಎಂ.ಪಿ 34057 ಗೆ ವಿಧಿಸಲಾದ ಹಿಂಬಿಲ್ಲು ರೂ.13017/- ನ್ನು ನಿಯಮಾನುಸಾರ ಹಿಂಪಾವತಿ ತಖ್ತೆ ತಯಾರಿಸಿ ಹಿಂಪಡೆದು, ಅಂತಿಮ ಬಿಲ್ಲು ತಯಾರಿಸಿ, ಹೆಚ್ಚುವರಿ ವಸೂಲಾತಿ ಇದ್ದಲ್ಲಿ ಗ್ರಾಹಕರಿಗೆ ಮರುಪಾವತಿಸಲು ಆದೇಶಿಸಿದೆ.

(ಎಸ್ ಎಸ್ ಸಾಣಿಕೊಪ್ಪ)
ವಕೀಲರು
ಸದಸ್ಯರು

(ಎಸ್.ಆರ್. ಮಂಜಪ್ಪ) 28/7/18
ಉಪಲೆಕ್ಕನಿಯಂತ್ರಣಾಧಿಕಾರಿ
ಸದಸ್ಯರು,

(ವಿ. ಎಸ್ ಬಬಲೇಶ್ವರ್)
ಅಧೀಕ್ಷಕ ಅಭಿಯಂತರರು(ವಿ)
ಅಧ್ಯಕ್ಷರು,

20-7-18

**ಪ್ರತಿ:**

1. ಆರ್ಥಿಕ ಸಲಹೆಗಾರರು, ನಿಗಮ ಕಚೇರಿ ಹುವಿಸಕಂನಿ., ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ.
2. ಮುಖ್ಯ ಅಭಿಯಂತರರು(ವಿ) ಬೆಳಗಾವಿ ವಲಯ ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ.
3. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)/(ಆಡಳಿತ ಮತ್ತು ಮಾಸಂಅ) ನಿಗಮ ಕಚೇರಿ ಹುವಿಸಕಂನಿ., ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ
4. ನಿಯಂತ್ರಣಾಧಿಕಾರಿ(ಆಂ.ಪ) ನಿಗಮ ಕಚೇರಿ ಹುವಿಸಕಂನಿ., ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ
5. ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ವಿಭಾಗ ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ಉಪವಿಭಾಗ-1, ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಆಪ್ತ ಕಾರ್ಯದರ್ಶಿ, ಓಂಬಡ್ಸಮನ್, ಕೆ.ಇ.ಆರ್.ಸಿ, 6 ಮತ್ತು 7 ನೇ ಮಹಡಿ, ಮಹಾಲಕ್ಷ್ಮೀ ಚೇಂಬರ್ಸ, ನಂ:9/2, ಎಂ.ಜಿ. ರೋಡ, ಬೆಂಗಳೂರು. ಸದರಿ ಮಾಹಿತಿಯನ್ನು ಓಂಬಡ್ಸಮನ್, ಕೆ.ಇ.ಆರ್.ಸಿ, ಬೆಂಗಳೂರು ರವರ ಗಮನಕ್ಕೆ ತರುವುದು.
8. ಶ್ರೀ ಮಿಶಾಬ್ ಎ. ಬಾಗಲಕೋಟಿ, ಸಿ.ಟಿ.ಎಸ್ ನಂ--4108, ಹಳೆ ಪಿ.ಬಿ ರಸ್ತೆ, ಬೆಳಗಾವಿ.